# IN THE COURT OF THE ADDL. SENIOR CIVIL JUDGE & JMFC., GUBBI

# **OS - 228/2023**

Witness present and duly sworn on : 02.02.2026.

Further cross Examination: by Counsel for Plaintiffs :

ನನ್ನ ಅಣ್ಣ ನನ್ನ ತಾತ ಮತ್ತು ಮುತ್ತಾತರವರನ್ನು ನೋಡಿರಲಿಲ್ಲ. ಮರಣ ಪ್ರಮಾಣ ಪತ್ರವನ್ನು ಪಡೆದಿರುವ ವ್ಯಕ್ತಿಗಳನ್ನು ನನ್ನ ಅಣ್ಣ ನೋಡಿರಲಿಲ್ಲ ಎಂದರೆ ಸಣ್ಣ ಹನುಮಯ್ಯ, ಕರಿಹನುಮ, ಕರಿಯಮ್ಮ @ ಮರಿಯಮ್ಮ ರವರನ್ನು ನೋಡಿದ್ದರು. ಹುಚ್ಚ, ವೆಂಕಟಹನುಮಯ್ಯ, ಕರಿಹನುಮಯ್ಯ ರವರನ್ನು ನೋಡಿರಲಿಲ್ಲ. ಸದರಿ ವ್ಯಕ್ತಿಗಳನ್ನು ನೋಡದೆ ಇದ್ದ ಕಾರಣ ಅವರ ಮರಣದ ದಿನಾಂಕವನ್ನು ಯಾರು ಹೇಳಿದರು ಎಂದರೆ ನನ್ನ ತಂದೆ ತಿಳಿಸಿರುತ್ತಾರೆ. ಸದರಿ ಮರಣ ಪ್ರಮಾಣ ಪತ್ರಗಳನ್ನು ನನ್ನ ಅಣ್ಣ ನ್ಯಾಯಾಲಯದ ಆದೇಶದ ಮೂಲಕ ಪಡೆದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗುಬ್ಬಿ ತಾಲ್ಲೂಕು ಕಛೇರಿಯಿಂದ ಪಡೆದಿರುತ್ತಾರೆ.

ದಾವಾ ಆಸ್ತಿಯು ಮೂಲತಹ ನನ್ನ ತಾತನವರಿಗೆ ಸೇರಿದ ಆಸ್ತಿ. ನನ್ನ ತಾತನಿಗೆ ಸೇರುವ ಪೂರ್ವದಲ್ಲಿ ಸದರಿ ಆಸ್ತಿಯು ಸರ್ಕಾರಿ ಸ್ವತ್ತು. ದಿನಾಂಕಃ 09.07.1940 ರಲ್ಲಿ ನನ್ನ ತಾತನಿಗೆ ಜಮೀನು ಮಂಜೂರು ಆಗಿರುತ್ತದೆ. 1 ನೇ ವಾದಿ ಗೋವಿಂದರಾಜು ರವರನ್ನು ನಾನು ನೋಡಿದ್ದೇನೆ. ಅವರು ಚಿರನಹಳ್ಳಿ ನಿವಾಸಿ. ಅವರ ತಂದೆಯ ಹೆಸರು ವೆಂಕಟೇಗೌಡ. ವೆಂಕಟೇಗೌಡರವರನ್ನು ನಾನು ನೋಡಿಲ್ಲ. ವೆಂಕಟೇಗೌಡ ರವರ ತಂದೆಯ ಹೆಸರು ಗೌಡೇಗೌಡ ಎಂದರೆ ಸರಿ. ಗೌಡೇಗೌಡರವರನ್ನು ನಾನು ನೋಡಿಲ್ಲ ಮತ್ತು ನನ್ನ ತಂದೆ ನೋಡಿರುತ್ತಾರೆ. ನನ್ನ ಅಣ್ಣ ಗೌಡೇಗೌಡ ಮತ್ತು ವೆಂಕಟೇಗೌಡ ರವರನ್ನು ನೋಡಿಲ್ಲ. ಗೌಡೇಗೌಡರವರಿಗೆ ಮೂರು ಜನ ಮಕ್ಕಳು ಇರಬಹುದು. ಅವರುಗಳು ವೆಂಕಟೇಗೌಡ, ನರಸಿಂಹಯ್ಯ ಮತ್ತು ರಂಗಯ್ಯ. ಗೌಡೇಗೌಡವರಿಗೆ ಗಂಗಣ್ಣ ಮತ್ತು ಶಿವಣ್ಣ ಎಂಬ ಮಕ್ಕಳು ಸಹ ಇದ್ದಾರೆ ಎಂದರೆ ಸರಿ. ಗೌಡೇಗೌಡರವರಿಗೆ 5 ಜನ ಮಕ್ಕಳು ಎಂದರೆ ಸರಿ.

ವೆಂಕಟೇಗೌಡ ರವರಿಗೆ ಗೋವಿಂದರಾಜು ಎಂಬ ಮಗ ಮತ್ತು ಇತರೆ ಮಕ್ಕಳ ಮಾಹಿತಿ ನನಗೆ ಇರುವುದಿಲ್ಲ. ವೆಂಕಟೇಗೌಡ ರವರಿಗೆ ತಿಮ್ಮಮ್ಮ, ನರಸಮ್ಮ, 1 ನೇ ವಾದಿ ಗೋವಿಂದರಾಜು, ಜಯಮ್ಮ, ವೆಂಕಟಲಕ್ಷ್ಮಮ್ಮ, ಅಣ್ಣಯಪ್ಪ, ಮಂಗಳಗೌರಮ್ಮ ಎಂಬ ಮಕ್ಕಳು ಎಂದರೆ ಸರಿ. ನರಸಿಂಹಯ್ಯ ರವರಿಗೆ ಮೂರು ಜನ ಮಕ್ಕಳು. ಅವರು ಹೆಸರು ನನಗೆ ನೆನಪಿಲ್ಲ. ತಿರುಮಲೇಗೌಡ, ವೆಂಕಟೇಶ, ಅಮ್ಮಯ್ಯ, ಚಂದ್ರ, ಪುಟ್ಟಲಕ್ಷ್ಮಮ್ಮ ರವರು ನರಸಿಂಹಯ್ಯ ರವರ ಮಕ್ಕಳು ಎಂದರೆ ಸರಿ. ಗೌಡೇಗೌಡ ರವರ 5 ಜನ ಮಕ್ಕಳು ಜೀವಂತ ಇರುವುದಿಲ್ಲ. ಅವರುಗಳು ಯಾವಾಗ ಪೌತಿ ಆದರು ಎಂದರೆ ನನಗೆ ಗೊತ್ತಿಲ್ಲ. ನರಸಿಂಹಯ್ಯ ರವರು ಪೌತಿ ಆಗಿರುವುದು ನನಗೆ ಗೊತ್ತು ಆದರೆ ದಿನಾಂಕ ನನಗೆ ಗೊತ್ತಿಲ್ಲ. ಸುಮಾರು 2017-18 ನಂತರದಲ್ಲಿ ಅವರು ಪೌತಿ ಆಗಿದ್ದಾರೆ.

ದಾವಾ ಸರ್ವೆ ನಂ.24, ಅದರ ರೀ ಸರ್ವೆ ನಂ.224 ರಲ್ಲಿ 4 ಎಕರೆ 31 ಗುಂಟೆ ಸ್ವತ್ತಿನ ಪಹಣಿಗಳನ್ನು ನಾನು ನೋಡಿದ್ದೇನೆ. ಸದರಿ ಪಹಣಿ ಪತ್ರಿಕೆಗಳ ಕಾಲಂ 12 (2) ರಲ್ಲಿ ವೆಂಕಟೇಗೌಡ ರವರ ಹೆಸರು ನಮೂದು ಇದೆ ಎಂದರೆ ಸರಿ. ಸದರಿ ವೆಂಕಟೇಗೌಡ ರವರು ಗೌಡೇಗೌಡ ರವರ ಮಗ ಎಂದರೆ ಸರಿ. ನಾನು ಹಾಕಿರುವ ಪಹಣಿ ಪತ್ರಿಕೆಗಳಲ್ಲಿ ಇತ್ತಿಚೀನವರೆಗೆ ವೆಂಕಟೇಗೌಡ ರವರ ಹೆಸರು ಬರುತ್ತಿತ್ತು ಎಂದರೆ 2017 ರವರೆಗೆ ಬರುತ್ತಿತ್ತು. ಗೌಡೇಗೌಡ ರವರು ಅಂದರೆ 1 ನೇ ವಾದಿಯ ತಾತ ದಿನಾಂಕಃ 28.05.1952 ರಲ್ಲಿ ನೊಂದಾಯಿತ ಕ್ರಯಪತ್ರದ ಮೂಲಕ ಸರ್ವೆ ನಂ.24 ರ 5 ಎಕರೆ ಮತ್ತು 3 ಎಕರೆ ಸ್ವತ್ತುಗಳನ್ನು ಕ್ರಯಕ್ಕೆ ಪಡೆದರು ಎಂದರೆ ಸರಿಯಲ್ಲ. ದಿನಾಂಕಃ 18.03.1956 ಮತ್ತು ದಿನಾಂಕಃ 17.04.1960 ರಲ್ಲಿ ಸರ್ವೆ ನಂ.24 ಮತ್ತು 223 ರಲ್ಲಿ 2 ಎಕರೆ ಮತ್ತು 3 ಎಕರೆ ಜಮೀನನ್ನು ನೊಂದಾಯಿತ ಕ್ರಯಪತ್ರದ ಮೂಲಕ ನನ್ನ ತಾತ ಮತ್ತು ಮುತ್ತಾತ ರವರಿಂದ ಕ್ರಯಕ್ಕೆ ಪಡೆದರು ಎಂದರೆ ಸರಿಯಲ್ಲ. ಸದರಿ ಖರೀದಿಗಳ ನಂತರ 1 ನೇ ವಾದಿಯ ತಾತ ಗೌಡೇಗೌಡ ರವರು ಖರೀದಿ ಮಾಡಿರುವ ಆಸ್ತಿಗಳ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಅವರ ಪೌತಿಯ ನಂತರ ಅವರ ಮಕ್ಕಳಾದ ವೆಂಕಟೇಗೌಡ, ನರಸಿಂಹಯ್ಯ, ರಂಗಯ್ಯ, ಗಂಗಣ್ಣ ಮತ್ತು ಶಿವಣ್ಣ ರವರು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಆದ ಕಾರಣ ಅವರ ಹೆಸರು ಪಹಣಿ ಪತ್ರಿಕೆಗಳ ಅನುಭವ ಕಾಲಂ ನಲ್ಲಿ ಬರುತ್ತಿತ್ತು ಎಂದರೆ

ಸರಿಯಲ್ಲ. ಅವರುಗಳ ಪೌತಿಯ ನಂತರ ವಾದಿಗಳು ಸದರಿ ಜಮೀನುಗಳ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ.

(Further cross examination deferred at the request of counsel for the plaintiffs)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi